

ಔರಂಗಾಬಾದ್‌ನ ‘ಬೀಬಿ ಕಾ ಮಕ್ಬರಾ’

## ‘ತಾಜ್ ಮಹಲ್’ನ ಪ್ರತಿರೂಪ

# ಬೀಬಿ ಕಾ ಮಕ್ಬರಾ



ಕೆತ್ತನೆಗಳಿಂದ ಕೂಡಿರುವ ಮಕ್ಬರಾ ಪ್ರವೇಶದ ಹೆಬ್ಬಾಗಿಲು

**‘ಮಿನಿ ತಾಜ್ ಮಹಲ್’, ‘ದಖ್ಖನ್ನಿನ ತಾಜ್’ ಎಂದು ಕರೆಸಿಕೊಳ್ಳುವ ‘ಬೀಬಿ ಕಾ ಮಕ್ಬರಾ’, ಮಹಾರಾಷ್ಟ್ರದ ಔರಂಗಾಬಾದ್‌ನಲ್ಲಿರುವ ಪ್ರಸಿದ್ಧ ಪ್ರವಾಸಿತಾಣ.**

**■ ಕೆ.ಪಿ. ಸತ್ಯನಾರಾಯಣ**

ಆಗ್ರಾದಲ್ಲಿರುವ ಜಗತ್ಪ್ರಸಿದ್ಧ ತಾಜ್ ಮಹಲ್, 1631ರಲ್ಲಿ ತೀರಿಕೊಂಡ ತನ್ನ ಮುದ್ದಿನ ಮಡದಿ ಮುಮ್ತಾಜ್‌ಳ ನೆನಪಿಗಾಗಿ ಶಹಜಹಾನ್ ಕಟ್ಟಿಸಿದ ಸ್ಮಾರಕ. ಸುಮಾರು 22,000 ಕಾರ್ಮಿಕರು, ಕುಶಲಕರ್ಮಿಗಳು 20 ವರ್ಷ ಕೆಲಸ ಮಾಡಿ, 1653ರ ಹೊತ್ತಿಗೆ ನಿರ್ಮಾಣ ಕಾರ್ಯ ಪೂರ್ಣಗೊಂಡಿತು. ಸಂಪೂರ್ಣ ಹಾಲುಗಲ್ಲಿನಲ್ಲಿ (ಬಿಳಿಯ ಅಮೃತಶಿಲೆ) ನಿರ್ಮಾಣಗೊಂಡ ಈ ಕಟ್ಟಡ ಪ್ರಪಂಚದ ಏಳು ಅದ್ಭುತಗಳಲ್ಲೊಂದು ಎಂದು ಪರಿಗಣಿತವಾಗಿದೆ. ಅನನ್ಯ ಪ್ರೀತಿಯ ಕಥೆ ಹೇಳುವ ಈ ಸ್ಮಾರಕವನ್ನು ನೋಡಲು ದೇಶ ವಿದೇಶಗಳ ಲಕ್ಷಾಂತರ ಜನರು ಪ್ರತಿವರ್ಷ ಬರುತ್ತಾರೆ. ಇವೆಲ್ಲಾ ಬಹುತೇಕರಿಗೆ ಗೊತ್ತಿರುವ ವಿಷಯ.

ನಾನೀಗ ತೋರಿಸಲು ಹೊರಟಿರುವುದು ಮಹಾರಾಷ್ಟ್ರದ ಔರಂಗಾಬಾದ್‌ನಲ್ಲಿ, ಖಮ್ ನದಿಯ ದಡದಲ್ಲಿರುವ ‘ಬೀಬಿ ಕಾ ಮಕ್ಬರಾ’ ಎಂಬ ಮತ್ತೊಂದು ತಾಜ್ ಮಹಲ್ ಕುರಿತು. ಇದನ್ನು ‘ದಖ್ಖನ್ನಿನ ತಾಜ್’ ಹಾಗೂ ‘ಮಿನಿ ತಾಜ್ ಮಹಲ್’ ಎಂದೂ ಕರೆಯುತ್ತಾರೆ. ತಾಜ್ ಮಹಲನ್ನು ಸಂಪೂರ್ಣವಾಗಿ ಅಮೃತಶಿಲೆಯಲ್ಲಿ ಕಟ್ಟಿದ್ದರೆ, ಬೀಬಿ ಕಾ ಮಕ್ಬರಾದ ಮುಖ್ಯ ಗುಮ್ಮಟ ಹಾಗೂ ಸುತ್ತಲ ನಾಲ್ಕು ಚಿಕ್ಕ ಗುಮ್ಮಟಗಳು ಮಾತ್ರ ಅಮೃತಶಿಲೆಯವು. ಉಳಿದಂತೆ ಕಟ್ಟಡಕ್ಕೆ ಬಿಳಿ ಗಾರೆಯ